Sri B. V. NARAYANA REDDY.—Is the Government aware that payment is still pending in regard to relief works undertaken in Kolar District?

Sri Kadidal MANJAPPA—I have no information.

Sri B. V. NARAYANA REDDY.—If the particular cases are brought to the notice of the Government, will they give redress?

Sri Kadidal MANJAPPA.—Certainly.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಕ್ಷಾಮ ನಿವಾರಣಾ ನಿಧಿಯಿಂದ ಮುನಿಸಿಪಾಲಿಟಿಗಳಿಗಾಗಿ ಖರ್ಚು ಮಾಡಬಹುದೆ?

ಶ್ರೀ ಕಡಿದಾಳ್ ಮಂಜಪ್ಪ.—ಸಾಮಾನ್ಯವಾಗಿ ಕೊಡುವುದಿಲ್ಲ ಮುನಿಸಿಪಾಲಿಟಿಯವರಿಗೆ; ಕೆಲವು ಸಂದರ್ಭಗಳಲ್ಲಿ ನೀರಿನ ಬಾವಿಗಳನ್ನು ತೋಡಿಸುವುದಕ್ಕೆ ಮಾತ್ರ ಕೊಡುತ್ತೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈ ಕ್ಷಾಮ ನಿವಾರಣೆ ಕೆಲಸವನ್ನು ಮುಂದುವರಿಸುತ್ತಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಮುಂದುವರಿಸುತ್ತಿದ್ದೇವೆ.

ಶ್ರೀ ಎಚ್. ಹುಚ್ಚುಮಾಸ್ತಿಗೌಡ.—ಡಿಸ್ಟ್ರೆಸ್ ರಿಲೀಫ್ ಫಂಡಿನಿಂದ ಹಣ ಕೊಟ್ಟಿರುವುದರ ಜತೆಗೆ ಗ್ರೋಮೋರ್ ಪುಡ್ ಫಂಡಿನಿಂದ ಕೂಡ ಕೋಲಾರ ಜಿಲ್ಲೆಗೆ ಹಣವನ್ನೊದಗಿಸುತ್ತಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು, ನುಮಾರು 9 ಲಕ್ಷ ರೂಪಾಯಿ ಒದಗಿಸಿದೆ.

ಶ್ರೀ ಎಚ್. ಹುಚ್ಚುಮಾಸ್ತಿಗೌಡ.—ಹಣ ದುರುಪಯೋಗವಾಗಿದೆಯೆಂದು ಹೇಳಿದಿರಿ; ಹಾಗೆ ಮಾಡಿದವರ ಮೇಲೆ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ತೆಗೆದುಕೊಂಡಿದ್ದೇವೆ.

ಶ್ರೀ ಎಚ್. ಹುಚ್ಚುಮಾಸ್ತಿಗೌಡ.—ಅದು ಯಾವ ಘಟ್ಟದಲ್ಲಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಎಕ್ಸ್‌ಟೆನ್ಶನ್ ನಡೆಯುತ್ತಿದೆ.

ಶ್ರೀ ಪಿ. ಮುನಿಯಪ್ಪ.—ಕ್ಷಾಮನಿವಾರಣೆಗೆ ರಷ್ಯ ನಿಧಿಯಿಂದ ಸಹಾಯ ಒದಗಿಸಿದ್ದೀರಾ?

ಶ್ರೀ ಕಡಿದಾಳ ಮಂಜಪ್ಪ.—ಹೌದು.

ಶ್ರೀ ಪಿ. ಮುನಿಯಪ್ಪ.—ರಷ್ಯಾ ಕಾಳಿನ ರೂಪದಲ್ಲಿ ಕೂಲಿ ಪಡೆದರೆ ಮಾತ್ರ ಕೆಲಸ ಕೊಡುತ್ತೇವೆ, ಇಲ್ಲದಿದ್ದರೆ ಕೊಡುವುದಿಲ್ಲವೆಂದು ಹೇಳಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೇನೂ ಇಲ್ಲ; ಕಾಳು ಅಥವಾ ಹಣದ ರೂಪದಲ್ಲಿ ಕೊಡುತ್ತೇವೆ.

ಶ್ರೀ ಪಿ. ಮುನಿಯಪ್ಪ.—ಕೆಲವು ಕಡೆ ರಷ್ಯಾ ನಿಧಿಯಿಂದ ಕೆಲಸಮಾಡಿದರೆ ಮಾತ್ರ ಕೆಲಸಮಾಡಿಸುತ್ತೇವೆಂದು ಹೇಳಿ ಹಣವನ್ನು ಕೊಟ್ಟು ಕೆಲಸಮಾಡಿಸುವುದನ್ನು ನಿಲ್ಲಿಸಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಚಿಂತಾಮಣಿ, ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳಿಗೆ ನುಮಾರು ಮೂರು ಲಕ್ಷ ಕೊಟ್ಟಿದೆ. ಇದಲ್ಲದೆ ಈ ಮೂರು ತಾಲ್ಲೂಕುಗಳಿಗೆ 20,383 ರೂಪಾಯಿಗಳು ಖರ್ಚಾಗಿಬೆಯೆಂದು ತಿಳಿಸಿದೆ, ಇದು ಯಾವುದು?

ಶ್ರೀ ಕಡಿದಾಳ್ ಮಂಜಪ್ಪ.—ರಿಲೀಫ್ ಕಾಮಗಾರಿಗಳಿಗೆ ಕೊಟ್ಟಿದೆ.

ಶ್ರೀ ಬಿ. ಹುಚ್ಚೇಗೌಡ.—ಸಾಮಾನ್ಯವಾಗಿ ಎಲ್ಲ ತಾಲ್ಲೂಕುಗಳಿಗೂ ಕೊಟ್ಟಿರುವಂತೆ ಕೊಟ್ಟಿರುವುದಲ್ಲದೆ, ಬೇರೆಯಾಗಿ ಈ ಮೂರು ತಾಲ್ಲೂಕುಗಳು ಮಾತ್ರ ನಮೂದಾಗಿವೆ: ಇದು ಏತಕ್ಕೋಸ್ಕರ?

ಶ್ರೀ ಕಡಿದಾಳ್ ಮಂಜಪ್ಪ.—ಸ್ಪೆಷಲ್ ಆಗಿ ಕೊಟ್ಟಿರಬಹುದು.

ಶ್ರೀ ಬಿ. ಹುಚ್ಚೇಗೌಡ.—ಹಣ ದುರುಪಯೋಗ ಪಡಿಸಿರುವವರು ಸರ್ಕಾರಿ ಅಧಿಕಾರಿಗಳೋ; ಅಪಾಸಾ ಖಾಸಗಿಯವರೊ?

ಶ್ರೀ ಕಡಿದಾಳ್ ಮಂಜಪ್ಪ.—ಅಧಿಕಾರಿಗಳೆಂದು ನಮ್ಮ ಗಮನಕ್ಕೆ ಬಂದಿದೆ.

Expenditure on Repair of Roads.

Q.—346. **Sri K. V. BYRE GOWDA** (Bangalore North).—

Will the Government be pleased to state:—

(*a*) the amount that the Government are spending per mile for repair of roads maintained both by the Government and Local Boards;

(*b*) whether it has come to their notice that the general condition of roads in the State is not good;

(*c*) whether they will consider to provide more funds per mile for I.V.C. (Inter-Village Cammunication) and District Board roads?

A.—(*a*) **Sri Kadidal MANJAPPA** (Minister for Revenue and Public Works).—

(*a*) The maintenance grants are:—

(1) Rs. 750 to 1,000 per mile for I Class Roads.
(2) Rs. 400 to 500 per mile for II Class Roads.
(3) Rs. 200 to 400 per mile for III Class Roads.
(4) Rs. 100 to 250 per mile for Class IV and I.V.C. Roads.

(*b*) This is a matter of opinion. The roads are maintained in as fair a condition as can be done with the grants allotted.

(*c*) Any increase in the present mileage grants is not feasible.

ಶ್ರೀ ಕೆ. ವಿ. ಬೈರೇಗೌಡ.—ಸರ್ಕಾರದವರ ರಕ್ಷಣೆಯಲ್ಲಿಯೂ ಮತ್ತು ಲೋಕಲ್ ಬೋರ್ಡುಗಳ ರಕ್ಷಣೆಯಲ್ಲಿಯೂ ಇರತಕ್ಕ ರಸ್ತೆಗಳ ಮೈಲಿಗಳು ಒಟ್ಟು

ಎಷ್ಟಾಗುತ್ತದೆಂಬುದನ್ನು ಹೇಳುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಧ್ಯವಿದೆ.

ಶ್ರೀ ಕೆ. ವಿ. ಬೈರೇಗೌಡ.—ಹಾಗಾದರೆ ಎಷ್ಟೆಂಬುದನ್ನು ಹೇಳಿ ?

Mr. SPEAKER.—Information may be furnished to him later on.

Sri Kadidal MANJAPPA.—I will furnish you information later on.

ಶ್ರೀ ಕೆ. ವಿ. ಬೈರೇಗೌಡ.—ಈ ಐ. ವಿ. ರಸ್ತೆಗಳು ಬಸ್ ರಾಷ್ಟ್ರೀಕರಣದ ಬಗ್ಗೆ ಕೆಲವು ರಸ್ತೆಗಳನ್ನು ರಾಷ್ಟ್ರೀಕರಣ ಮಾಡಿಕೊಂಡಿದ್ದರಿಂದ ಬಹಳ ಕೆಟ್ಟು ಹೋಗಿರುತ್ತವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಸ್ವಲ್ಪ ಮಟ್ಟಿಗೆ ಬಂದಿದೆ.

ಶ್ರೀ ಕೆ. ವಿ. ಬೈರೇಗೌಡ.—ಈಗ ತಾವು ಮೈಲಿಯೊಂದಕ್ಕೆ 4ನೆಯ ದರ್ಜೆಯ ರಸ್ತೆಗಳಿಗೆ 100—250 ರೂಪಾಯಿಗಳನ್ನೊದಗಿಸುತ್ತಿರುವುದು ಆ ರಸ್ತೆಗಳನ್ನು ಸರಿಯಾದ ಸ್ಥಿತಿಯಲ್ಲಿಡಲು ಸಾಧ್ಯವಾಗಿಲ್ಲ ವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

Mr. SPEAKER.—For this there is answer in (b).

ಶ್ರೀ ಕೆ. ವಿ. ಶಂಕರಗೌಡ.—ಸಂಸ್ಥಾನಾದ್ಯಂತವೂ ಒಟ್ಟು ಎಷ್ಟು ಮೈಲಿ ರಸ್ತೆಗಳಿರುತ್ತವೆಯೆಂಬುದನ್ನು ತಾವು ಹೇಳುವುದಕ್ಕಾಗುತ್ತದೆಯೇ ?

Sri Kadidal MANJAPPA.—I can give you information. But it takes some time.

ಶ್ರೀ ಕೆ. ವಿ. ಶಂಕರಗೌಡ.—ಹೋಗಲಿ, ಈ ರಸ್ತೆಗಳ ಪೈಕಿ ಈ ನಾಲ್ಕನೆ ದರ್ಜೆಗೆ ಸೇರಿರತಕ್ಕ ರಸ್ತೆ ಎಷ್ಟು ಮೈಲಿ ಇರುತ್ತದೆಯೆಂಬುದನ್ನು ಹೇಳುವುದಕ್ಕಾಗುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಸುಮಾರು 2 ಸಾವಿರ ಚಿಲ್ಲರೆ ಮೈಲಿಗಳಾಗಬಹುದು.

ಶ್ರೀ ಕೆ. ವಿ. ಶಂಕರಗೌಡ.—ಈ ಪೈಕಿ ತಾವು ಎಷ್ಟು ಮೈಲಿ ರಸ್ತೆಯಲ್ಲಿ ಸಂಚಾರ ಹೋಗಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ನಾನು ಎತ್ತಿನ ಗಾಡಿಗಳಲ್ಲೂ ಪ್ರಯಾಣ ಮಾಡಿದ್ದೇನೆ, ಕಾಲು ನಡಗೆಯಲ್ಲೂ ಪ್ರಯಾಣ ಮಾಡಿದ್ದೇನೆ—ಬಸ್‌ಗಳಲ್ಲಿಯೂ ಸಂಚಾರ ಮಾಡಿದ್ದೇನೆ. ಎಲ್ಲಾ ಅನುಭವವೂ ಇದೆ.

ಅಧ್ಯಕ್ಷರು.—ಎಷ್ಟು ಮೈಲಿಗಳ ಸಂಚಾರ ಮಾಡಿದ್ದೀರೆಂದು ಅವರು ಪ್ರಶ್ನೆ ಹಾಕಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪ.—ನಾನು ಆ ಲೆಕ್ಕಗಳನ್ನೆಲ್ಲಾ ಬರೆದಿಟ್ಟುಕೊಂಡಿಲ್ಲ.

ಶ್ರೀ ಕೆ. ವಿ. ಶಂಕರಗೌಡ.—ಹಾಗಾದರೆ ತಾವು ರಸ್ತೆಗಳನ್ನೇ ನೋಡದೆ ಇದನ್ನು ಹೇಗೆ ಹೇಳುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ನನಗಿರತಕ್ಕ ಅನುಭವದ ಮೇಲೆ.

ಶ್ರೀ ಕೆ. ವಿ. ಶಂಕರಗೌಡ.—ಹಾಗಿದ್ದರೆ ಆ ರಸ್ತೆಗಳನ್ನೇ ನೋಡದೆ ಹೇಳುವುದಕ್ಕೆ ಆಗುತ್ತದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅನುಭವದ ಮೇಲೆಯೇ ಎಲ್ಲವನ್ನೂ ಹೇಳುವುದು.

Standard test in the Public Works Department.

Q.—411 Sri K. PRABHAKAR (Nelamangala—Scheduled Castes).—

Will the Government be pleased to state:—

whether there is any standard test applied by the P.W.D. to find out readily the 'Composition' of sand, cement, etc., in regard to works in progress ?

Sri Kadidal MANJAPPA (Minister for Revenue and Public Works).—Yes.

ಶ್ರೀ ಕೆ. ಪ್ರಭಾಕರ್.—ನನ್ನ ಪ್ರಶ್ನೆಗೆ "ಹೌದು" ಎಂದು ಉತ್ತರ ಕೊಡಲಾಗಿದೆ. ಆದರೆ ಹಾಗೆ ಮಾಡುವುದಕ್ಕೆ ಬದಲಾಗಿ ಯಾರು ಯಾವಾಗ ಬೇಕಾದರೂ ಹೋಗಿ ನೋಡಿ ಅದರಲ್ಲಿರುವ ದೋಷದೋಷಗಳನ್ನು ಕಂಡುಹಿಡಿಯಲು ಅನುಕೂಲಿಸುವಂತೆ ಒಂದು ಸ್ಯಾಂಪಲ್ಲನ್ನು ಅಲ್ಲಿ ಸದಾ ತಯಾರಿಸಿಡುವಂತೆ ಮಾಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆಲ್ಲಾ ಸ್ಟ್ಯಾಂಡರ್ಡ್ ಟೆಸ್ಟ್ ಇದೆ.

ಶ್ರೀ ಕೆ. ಪ್ರಭಾಕರ್.—ನಾನು ಕೇಳಿದ್ದು ಇಲಾಖಾ ಜನರಿಂದ ಮಾತ್ರ ಪರೀಕ್ಷೆ ಮಾಡಿಸಲು ಅವಕಾಶವಿರತಕ್ಕ ಅಂಶವನ್ನಲ್ಲ. ಆ ವಿಚಾರದಲ್ಲಿ ಅಷ್ಟೇನೂ ಅನುಭವವಿಲ್ಲದಂಥವರೂ ಸಹ ಅದರ ಪರೀಕ್ಷೆಯನು ತಿಳಿದುಕೊಳ್ಳುವಂತೆ ಮಾಡಲು ಅಲ್ಲಿ ಸದಾ 'ಸ್ಯಾಂಪಲ್' ಇಡುವಂತೆ ಮಾಡಲು ಸಾಧ್ಯವಿಲ್ಲವೇ ಎಂದು.

ಶ್ರೀ ಕಡಿದಾಳ್ ಮಂಜಪ್ಪ.—ಡಿಪಾರ್ಟ್‌ಮೆಂಟಿನ ಜನರು ಉಳಿದ ಜನಗಳಿಗೆಲ್ಲಾ ಆ ಟೆಸ್ಟಿನ ಪ್ರಿಕಸಿಪಲ್ಸ್‌ನ್ನು ಅಪ್ಲೈ ಮಾಡುವಂತೆ ಮಾಡಲು ಸರ್ಕಾರದವರಿಗೆ ಬಹಳ ಕಷ್ಟವಿದೆ. ಟೆಕ್ನಿಕರ್ ಮನುಷ್ಯರಿಗೆ ಮಾತ್ರವೇ ಆ ಪರೀಕ್ಷೆ ಗೊತ್ತಾಗುವುದು.

ಶ್ರೀ ಕೆ. ಪ್ರಭಾಕರ್.—ಇದನ್ನು ತಿಳಿಯಲು ಬೇರೆಯವರಿಗೆ ಸಾಧ್ಯವಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಹಳ ವರ್ಷಗಳ ಅನುಭವಬೇಕಾಗುತ್ತದೆ.

Abolition of Jodi, Inam and Zamindari in the State.

Q.—504. Sri V. R. NAIDU (Malleswaram).—

Will the Government be pleased to state.—

(*a*) whether there have been representations for abolition of Jodi, Inam and Zamindari in the State ;

(*b*) if so, the steps taken by them in this matter ;

(*c*) whether they had constituted a committee to examine this question ;

(*d*) if so, the nature of the report made by the committee ?